ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೫೦ **Volume 150**	ಬೆಂಗಳೂರು, ಗುರುವಾರ, ಅಕ್ಟೋಬರ್ ೧೫, ೨೦೧೫ (ಅಶ್ವಯುಜ ೨೩, ಶಕ ವರ್ಷ ೧೯೩೭) **Bengaluru, Thursday, October 15, 2015 (Aashwayuja 23, Shaka Varsha 1937)**	ಸಂಚಿಕೆ ೪೨ **Issue 42**

ಭಾಗ ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಹೆಚ್‌ಡಿ 621 ಪಿಪಿಇ 2012, ಬೆಂಗಳೂರು ದಿನಾಂಕ : 12–08–2015

ಕರ್ನಾಟಕ ಪ್ರಾಸಿಕ್ಯೂಷನ್‌ಗಳು (ಅಭಿಯೋಜನೆ) ಮತ್ತು ಸರ್ಕಾರಿ ವ್ಯಾಜ್ಯಗಳ (ನೇಮಕಾತಿ) ನಿಯಮಗಳು, 2012ರ ಕರಡನ್ನು, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14)ರ 8ನೇ ಪ್ರಕರಣದೊಂದಿಗೆ ಓದಲಾದ (3)ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಅಧಿಸೂಚನೆ ಸಂಖ್ಯೆ : ಹೆಚ್‌ಡಿ 621 ಪಿಪಿಇ 2012ರ ದಿನಾಂಕ : 15–02–2014ರಲ್ಲಿ, ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳ ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ ;

ಮತ್ತು ಸದರಿ ರಾಜ್ಯಪತ್ರವನ್ನು 15ನೇ ಫೆಬ್ರವರಿ, 2014ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ ;

ಮತ್ತು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸದರಿ ಕರಡುಗೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸರ್ಕಾರವು ಸ್ವೀಕರಿಸಿಲ್ಲದಿರುವುದರಿಂದ ;

ಈಗ, ಆದ್ದರಿಂದ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14)ರ 8ನೇ ಪ್ರಕರಣದೊಂದಿಗೆ ಓದಲಾದ (3)ನೇ ಪ್ರಕರಣದ (1)ನೇ ಉಪ–ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ಅಧಿಸೂಚನೆ ಸಂಖ್ಯೆ : ಹೆಚ್‌ಡಿ 621 ಪಿಪಿಇ 2012ರ ದಿನಾಂಕ : 13–03–2014ರಲ್ಲಿ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ–IVಎ ಸಂಖ್ಯೆ : 224, ದಿನಾಂಕ : 13–03–2014ರಲ್ಲಿ ಪ್ರಕಟಿಸಿದನ್ನು ರದ್ದುಗೊಳಿಸಿರುವುದರಿಂದ, ಕರ್ನಾಟಕ ಸರ್ಕಾರವು ಈ ಮೂಲಕ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ ;

ನಿಯಮಗಳು

1. ಹೆಸರು ಮತ್ತು ಪ್ರಾರಂಭ :– (1) ಈ ನಿಯಮಗಳನ್ನು, ಕರ್ನಾಟಕ ಪ್ರಾಸಿಕ್ಯೂಷನ್‌ಗಳು (ಅಭಿಯೋಜನೆ) ಮತ್ತು ಸರ್ಕಾರಿ ವ್ಯಾಜ್ಯಗಳ (ನೇಮಕಾತಿ) (ತಿದ್ದುಪಡಿ) ನಿಯಮಗಳು, 2014 ಎಂದು ಕರೆಯತಕ್ಕದ್ದು.

   (2) ಇವು, ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಅನುಸೂಚಿಯ ತಿದ್ದುಪಡಿ :– ಕರ್ನಾಟಕ ಪ್ರಾಸಿಕ್ಯೂಷನ್‌ಗಳು (ಅಭಿಯೋಜನೆ) ಮತ್ತು ಸರ್ಕಾರಿ ವ್ಯಾಜ್ಯಗಳ (ನೇಮಕಾತಿ) ನಿಯಮಗಳು, 2012ರ ಅನುಸೂಚಿಯಲ್ಲಿ,–

   (ಎ) ಕ್ರಮ ಸಂಖ್ಯೆ–1ರಲ್ಲಿ ಪ್ರಾಸಿಕ್ಯೂಷನ್‌ಗಳ (ಅಭಿಯೋಜನೆ) ನಿರ್ದೇಶಕರ ಹುದ್ದೆಯ ಪ್ರವರ್ಗಕ್ಕೆ, ಮತ್ತು ಅದಕ್ಕೆ ಸಂಬಂಧಪಟ್ಟ ನಮೂದುಗಳಿಗೆ, ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು.

01	ಪ್ರಾಸಿಕ್ಯೂಷನ್‌ಗಳ (ಅಭಿಯೋಜನೆ) ನಿರ್ದೇಶಕರು (ರೂ.56,550 –79,800)	01	–	–	01	ಕರ್ನಾಟಕ ಉಚ್ಚ ನ್ಯಾಯಾಲಯದ ಸನ್ಮಾನ್ಯ ಮುಖ್ಯ ನ್ಯಾಯಾಧೀಶರ ಸಹಮತಿಯೊಂದಿಗೆ ಆಯ್ಕೆ ಮಾಡುವ ಮೂಲಕ ಉಪ ನಿರ್ದೇಶಕರ ವೃಂದದಿಂದ ಮುಂಬಡ್ತಿಯ ಮೂಲಕ.	ಪ್ರಾಸಿಕ್ಯೂಷನ್‌ಗಳ (ಅಭಿಯೋಜನೆ) ಉಪ ನಿರ್ದೇಶಕರ ವೃಂದದಲ್ಲಿ ಎರಡು ವರ್ಷಗಳಿಗಿಂತ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು ; ಪರಂತು, ಪ್ರಾಸಿಕ್ಯೂಷನ್‌ಗಳ (ಅಭಿಯೋಜನೆ) ಉಪ ನಿರ್ದೇಶಕರ ವೃಂದದಲ್ಲಿ ಎರಡು ವರ್ಷಗಳಿಗಿಂತ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿದ ವ್ಯಕ್ತಿಯು ಲಭ್ಯವಿಲ್ಲದಿದ್ದರೆ, ಒಂದು ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿದ ವ್ಯಕ್ತಿಯನ್ನು ಆಗ ಮುಂಬಡ್ತಿಗಾಗಿ ಪರಿಗಣಿಸಬಹುದು.
(ಬಿ) ಕ್ರಮ ಸಂಖ್ಯೆ-2ರಲ್ಲಿ ಪ್ರಾಸಿಕ್ಯೂಷನ್‌ಗಳ (ಅಭಿಯೋಜನೆ) ಉಪ ನಿರ್ದೇಶಕರ ಹುದ್ದೆಗಳ ಪ್ರವರ್ಗಕ್ಕೆ ಮತ್ತು ಅದಕ್ಕೆ ಸಂಬಂಧಪಟ್ಟ ನಮೂದುಗಳಿಗೆ, ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ :–							
02	ಪ್ರಾಸಿಕ್ಯೂಷನ್‌ಗಳ (ಅಭಿಯೋಜನೆ) ಉಪನಿರ್ದೇಶಕರು (ರೂ. 40,050–56,550)	03	–	01	04	ಸರ್ಕಾರಿ ಅಭಿಯೋಜಕರು/ಕಾನೂನು ಅಧಿಕಾರಿ (ಹಿರಿಯ) ವೃಂದದಿಂದ ಮುಂಬಡ್ತಿಯ ಮೂಲಕ	ಸರ್ಕಾರಿ ಅಭಿಯೋಜಕರು/ಕಾನೂನು ಅಧಿಕಾರಿ (ಹಿರಿಯ) ವೃಂದದಲ್ಲಿ ಮೂರು ವರ್ಷಗಳಿಗಿಂತ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು ;
(ಸಿ) ಕ್ರಮ ಸಂಖ್ಯೆ – 3ರಲ್ಲಿ ಸರ್ಕಾರಿ ಅಭಿಯೋಜಕರು/ಕಾನೂನು ಅಧಿಕಾರಿ (ಹಿರಿಯ) ಹುದ್ದೆಗಳ ಪ್ರವರ್ಗಕ್ಕೆ ಮತ್ತು ಅದಕ್ಕೆ ಸಂಬಂಧಪಟ್ಟ ನಮೂದುಗಳಲ್ಲಿ, ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–							
03	ಸರ್ಕಾರಿ ಅಭಿಯೋಜಕರು/ಕಾನೂನು ಅಧಿಕಾರಿ (ಹಿರಿಯ) (ರೂ. 36,300–53,850)	37	163	10	210	ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು/ಕಾನೂನು ಅಧಿಕಾರಿ (ಕಿರಿಯ) ವೃಂದದಿಂದ ಮುಂಬಡ್ತಿಗಾಗಿ. **ಸೂಚನೆ :** ಸರ್ಕಾರಿ ಅಭಿಯೋಜಕರನ್ನು ಕೋರ್ಟ್‌ನಿಂದ ಹೊರತುಪಡಿಸಿದ ಸ್ಥಳದಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ, ಕಾನೂನು ಅಧಿಕಾರಿ (ಹಿರಿಯ) ಎಂದು ಕರೆಯತಕ್ಕದ್ದು.	ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು/ಕಾನೂನು ಅಧಿಕಾರಿ (ಕಿರಿಯ) ವೃಂದದಲ್ಲಿ ಐದು ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿರಬೇಕು ; ಪರಂತು, ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು/ಕಾನೂನು ಅಧಿಕಾರಿ (ಕಿರಿಯ) ವೃಂದದಲ್ಲಿ ಐದು ವರ್ಷಗಳಿಗಿಂತ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿದ ವ್ಯಕ್ತಿಯು ಲಭ್ಯವಿಲ್ಲದಿದ್ದರೆ, ಮೂರು ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿದ ವ್ಯಕ್ತಿಗೆ ಮುಂಬಡ್ತಿಗೆ ಪರಿಗಣಿಸಬಹುದು.
(ಡಿ) ಕ್ರಮ ಸಂಖ್ಯೆ –4ರಲ್ಲಿ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು/ಕಾನೂನು ಅಧಿಕಾರಿ (ಕಿರಿಯ) ಹುದ್ದೆಗಳ ಪ್ರವರ್ಗಕ್ಕೆ ಮತ್ತು ಅದಕ್ಕೆ ಸಂಬಂಧಪಟ್ಟ ನಮೂದುಗಳಿಗೆ, ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ :–							
4	ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು/ಕಾನೂನು ಅಧಿಕಾರಿ (ಕಿರಿಯ) (ರೂ. 28,100–50,100)	77	39	11	127	ಸಹಾಯಕ ಸರ್ಕಾರಿ ಅಭಿಯೋಜಕರ ವೃಂದದಿಂದ ಮುಂಬಡ್ತಿಗಾಗಿ. **ಸೂಚನೆ :** ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರನ್ನು ಕೋರ್ಟ್‌ನಿಂದ ಹೊರತುಪಡಿಸಿದ ಸ್ಥಳದಲ್ಲಿ ಕಾರ್ಯನಿರ್ವಹಿಸುವುದಕ್ಕೆ ಕಾನೂನು ಅಧಿಕಾರಿ (ಕಿರಿಯ) ಎಂದು ಕರೆಯತಕ್ಕದ್ದು.	ಸಹಾಯಕ ಸರ್ಕಾರಿ ಅಭಿಯೋಜಕರ ವೃಂದದಲ್ಲಿ ಐದು ವರ್ಷಗಳಿಗಿಂತಲೂ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿದ ವ್ಯಕ್ತಿ.

(ಇ) ಕ್ರಮ ಸಂಖ್ಯೆ-4ರಲ್ಲಿ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು/ಕಾನೂನು ಅಧಿಕಾರಿ (ಕಿರಿಯ) ಹುದ್ದೆಗಳ ಪ್ರವರ್ಗಕ್ಕೆ ಸಂಬಂಧಪಟ್ಟ ನಮೂದುಗಳ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-							
4(ಎ)	ಲೆಕ್ಕ ಪರಿಶೋಧನಾ ಅಧಿಕಾರಿ (ರೂ. 22,800-43,200)	01	-	-	01	ರಾಜ್ಯ ಲೆಕ್ಕಪತ್ರಗಳ ಇಲಾಖೆಯಿಂದ ತತ್ಸಮಾನ ವೃಂದದಲ್ಲಿ ಅಧಿಕಾರಿಯನ್ನು ನಿಯೋಜಿಸುವ ಮೂಲಕ	
4(ಬಿ)	ಲೆಕ್ಕ ಅಧೀಕ್ಷಕರು (ರೂ. 21,600-40,050)	01	-	-	01	ರಾಜ್ಯ ಲೆಕ್ಕಪತ್ರಗಳ ಇಲಾಖೆಯಿಂದ ತತ್ಸಮಾನ ವೃಂದದಲ್ಲಿ ಅಧಿಕಾರಿಯನ್ನು ನಿಯೋಜಿಸುವ ಮೂಲಕ	

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ದೇವೇಂದ್ರಪ್ಪ ಕಟ್ಟಿಮನಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ

(ಪೊಲೀಸ್ ಸೇವೆಗಳು-ಬಿ)

P.R. 527

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಆಕುಕ 414 ಪಿಐಎಂ 2015, ಬೆಂಗಳೂರು ದಿನಾಂಕ : 12-08-2015

ಆಯುಷ್ ಇಲಾಖೆಯಲ್ಲಿ ವೈದ್ಯಾಧಿಕಾರಿ (ಆಯುರ್ವೇದ) ಆಗಿ ಸೇವೆ ಸಲ್ಲಿಸುತ್ತಿರುವ ಈ ಕೆಳಕಂಡ ವೈದ್ಯರುಗಳು ಅವರ ಹೆಸರಿನ ಮುಂದೆ ನಮೂದಿಸಲಾದ ದಿನಾಂಕದಂದು ಪರಿವೀಕ್ಷಣಾ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಾವಳಿಗಳ 1977ರ ನಿಯಮ 5(1)(ಎ)ರನ್ವಯ ತೃಪ್ತಿಕರವಾಗಿ ಪೂರೈಸಿರುವುದಾಗಿ ಘೋಷಿಸಿದೆ.

ಕ್ರ. ಸಂ.	ವೈದ್ಯರ ಹೆಸರು ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ	ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುವುದಾಗಿ ಘೋಷಿಸಿರುವ ದಿನಾಂಕ
1.	ಡಾ॥ ಗುರುಪ್ರಸಾದ್ ಕೆ.ಜೆ. ವೈದ್ಯಾಧಿಕಾರಿ ಸರ್ಕಾರಿ ಆಯುರ್ವೇದ ಆಸ್ಪತ್ರೆ ಗುಂಡ್ಲುಪೇಟೆ, ಗುಂಡ್ಲುಪೇಟೆ ತಾಲ್ಲೂಕು ಚಾಮರಾಜನಗರ ಜಿಲ್ಲೆ	19-05-2015
2.	ಡಾ॥ ವೀರಣ್ಣಬಸಯ್ಯ ಮಠಪತಿ ವೈದ್ಯಾಧಿಕಾರಿ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಸೋಮಹಳ್ಳಿ, ಗುಂಡ್ಲುಪೇಟೆ ತಾಲ್ಲೂಕು ಚಾಮರಾಜನಗರ ಜಿಲ್ಲೆ	19-05-2015

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಕಮಲಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಭಾ.ವೈ.ಪ. ಮತ್ತು ಸಮನ್ವಯ)

P.R. 528

S.C.- 50

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಆಕುಕ 443 ಪಿಐಎಂ 2015, ಬೆಂಗಳೂರು ದಿನಾಂಕ : 25–08–2015

ಆಯುಷ್ ಇಲಾಖೆಯಲ್ಲಿ ವೈದ್ಯಾಧಿಕಾರಿ (ಆಯುರ್ವೇದ) ಆಗಿ ಸೇವೆ ಸಲ್ಲಿಸುತ್ತಿರುವ ಈ ಕೆಳಕಂಡ ವೈದ್ಯರುಗಳು ಅವರ ಹೆಸರಿನ ಮುಂದೆ ನಮೂದಿಸಲಾದ ದಿನಾಂಕದಂದು ಪರಿವೀಕ್ಷಣಾ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಾವಳಿಗಳ 1977ರ ನಿಯಮ 5(1)(ಎ)ರನ್ವಯ ತೃಪ್ತಿಕರವಾಗಿ ಪೂರೈಸಿರುವುದಾಗಿ ಘೋಷಿಸಿದೆ.

ಕ್ರ ಸಂ.	ವೈದ್ಯರ ಹೆಸರು ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ	ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುವುದಾಗಿ ಘೋಷಿಸಿರುವ ದಿನಾಂಕ
1.	ಡಾ॥ ಮಹೇಶ್ ಎಂ.ಕೆ. ವೈದ್ಯಾಧಿಕಾರಿ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಉದ್ರಿ, ಸೊರಬ ತಾಲ್ಲೂಕು ಶಿವಮೊಗ್ಗ ಜಿಲ್ಲೆ	20–05–2015
2.	ಡಾ॥ ಅಲ್ಲಾವುದ್ದೀನ್ ನಡಾಫ್ ವೈದ್ಯಾಧಿಕಾರಿ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಗುಡವಿ, ಸೊರಬ ತಾಲ್ಲೂಕು ಶಿವಮೊಗ್ಗ ಜಿಲ್ಲೆ	20–05–2015
3.	ಡಾ॥ ವಿಜಯಲಕ್ಷ್ಮಿ ಎಸ್.ಆರ್. ವೈದ್ಯಾಧಿಕಾರಿ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಸೈದರಕಲ್ಲಹಳ್ಳಿ, ಭದ್ರಾವತಿ ತಾಲ್ಲೂಕು ಶಿವಮೊಗ್ಗ ಜಿಲ್ಲೆ	20–05–2015
4.	ಡಾ॥ ರವಿಶಂಕರ್ ಉಡುಪ ವೈದ್ಯಾಧಿಕಾರಿ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಸಾಲೂರು, ತೀರ್ಥಹಳ್ಳಿ ತಾಲ್ಲೂಕು ಶಿವಮೊಗ್ಗ ಜಿಲ್ಲೆ	20–05–2015
5.	ಡಾ॥ ರವಿ ಕೆ. ಗಂಗೂರ್ ವೈದ್ಯಾಧಿಕಾರಿ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಬಸವಾನಿ, ತೀರ್ಥಹಳ್ಳಿ ತಾಲ್ಲೂಕು ಶಿವಮೊಗ್ಗ ಜಿಲ್ಲೆ	20–05–2015
6.	ಡಾ॥ ಅನಿಲ್‌ಕುಮಾರ್ ಎಸ್.ಎಚ್. ವೈದ್ಯಾಧಿಕಾರಿ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಕಡೇನಂದಿಹಳ್ಳಿ, ಶಿಕಾರಿಪುರ ತಾಲ್ಲೂಕು ಶಿವಮೊಗ್ಗ ಜಿಲ್ಲೆ	20–05–2015

ಕ್ರ ಸಂ.	ವೈದ್ಯರ ಹೆಸರು ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ	ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುವುದಾಗಿ ಘೋಷಿಸಿರುವ ದಿನಾಂಕ
7.	ಡಾ॥ ಮಹಾಲಿಂಗಪ್ಪ ಟಿ.ಸಿ. ವೈದ್ಯಾಧಿಕಾರಿ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಮಲ್ಲಾಪುರ, ಸೊರಬ ತಾಲ್ಲೂಕು ಶಿವಮೊಗ್ಗ ಜಿಲ್ಲೆ	20-05-2015

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾ.ವೈ.ಪ. ಮತ್ತು ಸಮನ್ವಯ)

P.R. 529
S.C. - 50

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ಆಕುಕ 304 ಪಿಐಎಂ 2015, ಬೆಂಗಳೂರು ದಿನಾಂಕ : 10-08-2015

ಡಾ॥ ಸಾಜೀ ಡಿ'ಸೋಜಾ'ಸ್ ಕೆ.ಎಸ್.ಎ.ಸಿ., ಹಾಸ್ಪಿಟಲ್ ಮಲ್ಟಿ ಸ್ಪೆಷಾಲಿಟಿ ಆಯುರ್ವೇದ, ಕೋರಮಂಗಲ, ಇದನ್ನು ರಾಜ್ಯ ಸರ್ಕಾರಿ ನೌಕರರ ಚಿಕಿತ್ಸೆಗಾಗಿ ಮಾನ್ಯತೆ ನೀಡಿರುವ ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಆಸುಇ 37 ಎಸ್.ಎಂ.ಆರ್ 2013, ದಿನಾಂಕ : 21-06-2014ರಲ್ಲಿನ 3ನೇ ಸಾಲಿನಲ್ಲಿರುವ **"ಷೆಡ್ಯೂಲ್-Iರ ಐಟಂ 349ರ ನಂತರ"** ಎಂಬುದರ ಬದಲಾಗಿ **"ಷೆಡ್ಯೂಲ್-IIರ ಉಪ ಶೀರ್ಷಿಕೆ (ಅ)ರ ಐಟಂ 7ರ ನಂತರ"** ಎಂದು ಹಾಗೂ 4ನೇ ಸಾಲಿನ **"(350)"** ಎಂಬುದಕ್ಕೆ ಬದಲಾಗಿ **"(8)"** ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾ.ವೈ.ಪ. ಮತ್ತು ಸಮನ್ವಯ)

P.R. 530
S.C. - 100

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಕಾಇ 52 ಕಾಬಾನಿ 2013, ಬೆಂಗಳೂರು ದಿನಾಂಕ : 03-07-2015

ಕಾರ್ಖಾನೆಗಳ ಕಾಯ್ದೆ 1948ರ (ಕೇಂದ್ರ ಕಾಯ್ದೆ 1948) ಕಲಂ 4ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಮೆ॥ ಬಯೋಕಾನ್ ಬಯೋಫಾರ್ಮಾಸ್ಯೂಟಿಕಲ್ಸ್ ಲಿಮಿಟೆಡ್, ಬೆಂಗಳೂರು, ಲೈಸನ್ಸ್ ನಂ. MYB-14761, ಈ ಸಂಸ್ಥೆಯನ್ನು ಮೆ॥ ಬಯೋಕಾನ್ ಲಿಮಿಟೆಡ್, ಬೆಂಗಳೂರು, ಲೈಸನ್ಸ್ ನಂ. MYB-14305, ಈ ಸಂಸ್ಥೆಯೊಂದಿಗೆ ಒಂದುಗೂಡಿಸಲು ಈ ಕೆಳಗಿನ ಷರತ್ತುಗಳಿಗೊಳಪಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಅನುಮತಿ ನೀಡಿದೆ.

ಷರತ್ತುಗಳು :

1. ಕಾರ್ಖಾನೆಯ ಆಡಳಿತ ವರ್ಗದವರು ಎರಡು ಕಾರ್ಖಾನೆಗಳ ನಿವೇಶನ ಹಾಗೂ ಎಲ್ಲಾ ಕಟ್ಟಡದ ವಿವರಗಳನ್ನು ಒಳಗೊಂಡಂತೆ ತಯಾರಿಸಲಾದ ನಕ್ಷೆಗಳನ್ನು ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ನಿರ್ದೇಶಕರವರಿಗೆ ಸಲ್ಲಿಸಿ ಅನುಮೋದನೆ ಪಡೆದುಕೊಳ್ಳುವುದು ಹಾಗೂ ವಿಲೀನದಂತೆ ಲೈಸೆನ್ಸ್‌ನಲ್ಲಿ ಅವಶ್ಯಕ ತಿದ್ದುಪಡಿ (ಕಾರ್ಮಿಕರು ಹಾಗೂ ಅಶ್ವ ಶಕ್ತಿ/ಕಿ.ವ್ಯಾ) ಹೊಂದಲು ನಿಯಮಗಳಂತೆ ಅರ್ಜಿ ಸಲ್ಲಿಸತಕ್ಕದ್ದು.
2. ಎರಡೂ ಕಾರ್ಖಾನೆಗಳು ವಿಲೀನಗೊಳ್ಳುತ್ತಿರುವ ಪ್ರಕ್ರಿಯೆಯಿಂದ ಕೆಲಸಗಾರರಿಗೆ ಈಗಾಗಲೇ ನಿಯಮಾನುಸಾರ ಒದಗಿಸಿರುವ ಯಾವುದೇ ಸೌಲಭ್ಯ/ಸವಲತ್ತುಗಳಿಂದ ವಂಚಿತರಾಗದಂತೆ ನಿಗಾವಹಿಸುವುದು.
3. ಎರಡೂ ಕಾರ್ಖಾನೆಗಳ ಲೈಸೆನ್ಸ್ ವಿಲೀನದ ನಂತರ ಉಂಟಾಗುವ ಪರಮಾವಧಿ ಕೆಲಸಗಾರರ ಸಂಖ್ಯೆಗೆ ಅನುಗುಣವಾಗಿ ನಿಯಮದಲ್ಲಿ ಪ್ರದತ್ತವಾಗಿರುವಂತೆ ಸುರಕ್ಷತೆ, ಆರೋಗ್ಯ ಹಾಗೂ ಕಲ್ಯಾಣ ಸೌಲಭ್ಯಗಳನ್ನು ಅನುಷ್ಠಾನಕ್ಕೆ ತರತಕ್ಕದ್ದು.

4. ಕಾರ್ಖಾನೆಗಳು ವಿಲೀನಗೊಂಡಿರುವ ಹೊಸ ಹೆಸರಿನ ಸಂಸ್ಥೆಗೆ ಪ್ರಸ್ತುತವಾಗಿ ಇರುವ ಎಲ್ಲಾ ಕಾರ್ಮಿಕರ ಸೇವೆಯನ್ನು ವರ್ಗಾಯಿಸಿ ಅದನ್ನು ಮುಂದುವರೆಸುವುದು.
5. ಕಾರ್ಖಾನೆಯ ಲೈಸೆನ್ಸ್ ಸಂ. MYB-14761 ಅನ್ನು ವಜಾಗೊಳಿಸಲು ಕಾರ್ಖಾನೆಗಳು, ಬಾಯ್ಲರ್‌ಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ, ನಿರ್ದೇಶನಾಲಯಕ್ಕೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

P.R. 531
S.C. - 50

ಬೋರಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ
(ಕಾರ್ಖಾನೆ ಮತ್ತು ಬಾಯ್ಲರುಗಳು)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಆಕುಕ 536 ಪಿಐಎಂ 2012, ಬೆಂಗಳೂರು ದಿನಾಂಕ : 18–08–2015

ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963ರ ನಿಯಮ 3ರ ಖಂಡ (ಎಫ್‌ಎಫ್)ನ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಸದರಿ ನಿಯಮಗಳ ಷೆಡ್ಯೂಲ್–IIರ ಉಪ ಶೀರ್ಷಿಕೆ (ಅ)ರ ಐಟಂ 8ರ ನಂತರ ಈ ಕೆಳಕಂಡ ಐಟಂನ್ನು ಸೇರ್ಪಡೆಗೊಳಿಸಿದೆ :–

09. ಜೆ.ಎಸ್.ಎಸ್. ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಮೈಸೂರು–570 028.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾ.ವೈ.ಪ. ಮತ್ತು ಸಮನ್ವಯ)

HEALTH AND FAMILY WELFARE SECRETARIAT

NOTIFICATION

No. HFW 536 PIM 2012, Bangaluru, Dated : 18-08-2015.

In exercise of the powers conferred by clause (ff) of rule 3 of the Karnataka Government Servants' (Medical Attendance) Rules 1963, the Government of Karnataka hereby adds the following item after item 8 of sub-heading (a) of Schedule II to the said rules, namely :-

09. J.S.S. Ayurveda Hospital, Lalithadripura Road, Alanahalli, Mysuru-570 028.

P. R. 532
SC-100

By Order and in the name of the Governor of Karnataka,

B. KAMALAMMA
Under Secretary to Government,
Health and Family Welfare Department
(IMD & Co-ordination)

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ ಕಾಇ 33 ಕಾಬಾಸೇ 2015, ಬೆಂಗಳೂರು, ದಿನಾಂಕ: 25.08.2015.

ದಿ ಇಂಡಿಯನ್ ಬಾಯ್ಲರ್ ಆಕ್ಟ್, 1923ರ ಅಧಿನಿಯಮ 28(ಎ) (1ಎ) ಎಫ್ ರ ಅನ್ವಯ ಮತ್ತು ಬಾಯ್ಲರ್ ಅಟೆಂಡೆಂಟ್ಸ್ ನಿಯಮಗಳು, 2011ರ ನಿಯಮಗಳು 9(ಎ) (ಬಿ) ಮತ್ತು 10ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಕರ್ನಾಟಕ ಸರ್ಕಾರವು ಈ ಕೆಳಕಂಡವರನ್ನೊಳಗೊಂಡ ಬಾಯ್ಲರ್ ಅಟೆಂಡೆಂಟ್ಸ್ ಪರೀಕ್ಷಾ ಮಂಡಳಿಯನ್ನು ದಿನಾಂಕ: 13/07/2015 ರಿಂದ ಒಂದು ವರ್ಷದ ಅವಧಿಯವರೆಗೆ ಪುನರ್ ರಚಿಸಿ ಆದೇಶ ಹೊರಡಿಸಿದೆ.

ಕ್ರ.ಸಂ	ಹೆಸರು ಮತ್ತು ವಿಳಾಸ	ಪದನಾಮ
1	ಬಾಯ್ಲರುಗಳ ನಿರ್ದೇಶಕರು, ಕಾರ್ಮಿಕ ಭವನ, ಬೆಂಗಳೂರು	ಪದನಿಮಿತ್ತ ಅಧ್ಯಕ್ಷರು
2	ಬಾಯ್ಲರುಗಳ ಸಹಾಯಕ ನಿರ್ದೇಶಕರು, ಬಿಟಿಟಿಇ ಸೆಲ್, ಕಾರ್ಮಿಕ ಭವನ, ಬೆಂಗಳೂರು.	ಕಾರ್ಯದರ್ಶಿ
3	ಶ್ರೀ ಸುರೇಂದ್ರ ಕುಮಾರ್ ವರ್ಮಾ, ಅಸಿಸ್ಟೆಂಟ್ ವೈಸ್ ಪ್ರೆಸಿಡೆಂಟ್, ಮೆ: ಜುಬಿಲಿಯೆಂಟ್ ಆರ್ಗೋನೋಸಿಸ್ ಲಿ., ನಂಜನಗೂಡು, ಮೈಸೂರು.	ಸದಸ್ಯರು
4	ಶ್ರೀ ವಿ. ಗೋವಿಂದರಾಜು, ಅಸಿಸ್ಟೆಂಟ್ ಜನರಲ್ ಮ್ಯಾನೇಜರ್, ಆಪರೇಷನ್ (ಸ್ಟೀಂ ಪ್ಲಾಂಟ್) ಮೆ: ಇಂಡಾಲ್ಕೋ ಇಂಡಸ್ಟ್ರೀಸ್, ಬೆಳಗಾವಿ.	ಸದಸ್ಯರು
5	ಶ್ರೀ ಪ್ರಕಾಶ್ ಎಸ್. ದೇಶಪಾಂಡೆ, ಜನರಲ್ ಮ್ಯಾನೇಜರ್, ಪವರ್ ಪ್ಲಾಂಟ್, ಮೆ: ಕಿರ್ಲೋಸ್ಕರ್ ಫೆರಸ್ ಇಂಡಸ್ಟ್ರೀಸ್ ಲಿ., ಕೊಪ್ಪಳ.	ಸದಸ್ಯರು
6	ಶ್ರೀ ನರೇಂದ್ರಕುಮಾರ್ ಕಾಬ್ರಾ. ಬಿ. 107, ಪ್ರಸ್ಟೀಜ್, ಸೇಂಟ್ ಜಾನ್ಸ್ ವುಡ್, ನಂ.80, ತಾವರೆಕೆರೆ ಮುಖ್ಯ ರಸ್ತೆ, ಕೋರಮಂಗಲ. ಬೆಂಗಳೂರು–29.	ಸದಸ್ಯರು
7	ಶ್ರೀ ನಂಜಯ್ಯ, ಅಸಿಸ್ಟೆಂಟ್ ಜನರಲ್ ಮ್ಯಾನೇಜರ್, ಪವರ್ ಪ್ಲಾಂಟ್, ಮೆ: ಮೈಸೂರು ಪೇಪರ್ ಮಿಲ್ಸ್ ಲಿ., ಶಿವಮೊಗ್ಗ.	ಸದಸ್ಯರು
8	ಶ್ರೀ ಸುಧಾಕರ ಬಾಳಿಗಾ, ಮೆ: ವಿನಾಯಕ ಇಂಜಿನಿಯರಿಂಗ್ ವರ್ಕ್ಸ್, ಮಂಗಳೂರು.	ಸದಸ್ಯರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

P.R.538 **ಬೋರಯ್ಯ**

S.C.50 ಸರ್ಕಾರದ ಅಧೀನ ಕಾರ್ಯದರ್ಶಿ,

ಕಾರ್ಮಿಕ ಇಲಾಖೆ (ಕಾರ್ಖಾನೆ ಮತ್ತು ಬಾಯ್ಲರುಗಳು).

HOME SECRETARIAT

ORDER

No: HD 72 SST 2013. BENGALURU, DATED: 03-09-2015.

WHEREAS the Government of Karnataka having regard to the circumstances prevailing in the State are satisfied that it is necessary that all Commissioners of Police and all the District Magistrates to be empowered to exercise the powers under sub-Section (2) of Section 3 of the Karnataka Prevention of Dangerous Activities of Boot-leggers, Drug-Offenders, Gamblers, Goondas, Immortal Traffic Offenders and Slum-Grabbers Act, 1985 (Karnataka Act No.12 of 1985).

Now, therefore in exercise of the powers conferred by sub-Section (2) of Section 3 of the Karnataka Prevention of Dangerous Activities of Boot-leggers, Drug-Offenders, Gamblers, Goondas, Immortal Traffic Offenders and Slum Grabbers Act, 1985 the Government of Karnataka hereby direct that all the Commissioners of Police and all the District Magistrates in the State shall exercise the powers conferred by sub-Section (1) of Section 3 of the Act within the limits of their jurisdiction for a period of three **months from 10/09/2015 to 09-12-2015.**

By Order and in the name of the Governor of Karnataka,

P.R.539 **D.S. JOGOJE,**

S.C. 50 Under Secretary to Government (I/c)

Home Department. (Law & Order)

HOME SECRETARIAT

NOTIFICATION

No: HD 284 SST 2012, BENGALURU DATED: 03/09/2015

In exercise of the powers conferred under Section 3 of the National Security Act, 1980 (Act 65 of 1980) Government of Karnataka hereby authorize the District Magistrates and the Commissioners of Police to exercise the powers conferred under sub-Section 2 of Section 3 of the National Security Act, 1980 for a period of three months **from 06-09-2015 to 05-12-2015.**

By Order and in the name of the Governor of Karnataka,

P.R.540 **D.S. JOGOJE,**

S.C. 50 Under Secretary to Government (I/c),

Home Department. (Law & Order)

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ ಆರ್‌ಡಿ 47 ಎಲ್‌ಜಿಎಂ 2014, ಬೆಂಗಳೂರು, ದಿನಾಂಕ : 17.08.2015

ಕರ್ನಾಟಕ ಭೂ ಕಂದಾಯ ಅಧಿನಿಯಮ 1964, ಸಬ್ ಸೆಕ್ಷನ್ (1) 94–ಎ ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಮೈಸೂರು ಜಿಲ್ಲೆಯ ವರುಣ ವಿಧಾನ ಸಭಾ ಕ್ಷೇತ್ರದ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯನ್ನು** ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಈ ಕೆಳಕಂಡಂತೆ ರಚಿಸಲಾಗಿದೆ.

ಕ್ರ.ಸಂ	ಸದಸ್ಯರು	ಪ್ರವರ್ಗ
1	ಶ್ರೀ ಹೆಚ್.ಬಿ. ಕುಮಾರ್, ಹೊಸಕೋಟೆ ಗ್ರಾಮ, ನಂಜನಗೂಡು ತಾಲ್ಲೂಕು	ಅಧ್ಯಕ್ಷರು
2	ಶ್ರೀ ಕೆಂಚೇಗೌಡ ಬಿನ್ ಬೊಕ್ಕಳೇಗೌಡ, ತಾಂಡವಪುರ ಗ್ರಾಮ, ನಂಜನಗೂಡು ತಾಲ್ಲೂಕು	ಸದಸ್ಯರು, (ಸಾಮಾನ್ಯ)
3	ಶ್ರೀಮತಿ ಸುಂದ್ರಮ್ಮ ಕೋಂ ಬಸವಯ್ಯ, ಬಿದರಗೂಡು, ನಂಜನಗೂಡು ತಾಲ್ಲೂಕು	ಸದಸ್ಯರು (ಮಹಿಳೆ)
4	ಶ್ರೀ ಮಹದೇವನಾಯಕ, ಆಯರಹಳ್ಳಿ, ಮೈಸೂರು ತಾಲ್ಲೂಕು	ಸದಸ್ಯರು, (ಪರಿಶಿಷ್ಟ ಪಂಗಡ)
5	ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರರು	ಸದಸ್ಯ–ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಉದಯ ಆರ್. ನಾಯಕ್,
ಪೀಠಾಧಿಕಾರಿ,
ಕಂದಾಯ ಇಲಾಖೆ (ಭೂ ಮಂ,–2).

P.R.541
SC - 25

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ ಆರ್‌ಡಿ 06 ಎಲ್‌ಜಿಯು 2014, ಬೆಂಗಳೂರು, ದಿನಾಂಕ: 11.08.2015.

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ವಿಧಾನಸಭಾ ಕ್ಷೇತ್ರದ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗೆ ನಾಮನಿರ್ದೇಶನ ಮಾಡಿ ಹೊರಡಿಸಲಾದ ಸರ್ಕಾರದ ಅಧಿಸೂಚನೆ ಸಂಖ್ಯೆ ಆರ್‌ಡಿ 6 ಎಲ್‌ಜಿಯು 2014, ದಿನಾಂಕ 12–02–2015ನ್ನು ಹಿಂಪಡೆಯಲಾಗಿದೆ ಹಾಗೂ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ಸಬ್ ಸೆಕ್ಷನ್ (1) 94–ಎ ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ವಿಧಾನ ಸಭಾ ಕ್ಷೇತ್ರದ ಬಗರ್ ಹುಕುಂ** ಸಾಗುವಳಿ ಸಕ್ರಮೀಕರಣ ಸಮಿತಿಯನ್ನು ಈ ಕೂಡಲೇ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ಕೆಳಕಂಡಂತೆ ರಚಿಸಲಾಗಿದೆ.

ಕ್ರ.ಸಂ	ಸದಸ್ಯರು	ಪ್ರವರ್ಗ
1	ಶ್ರೀ ಡಿ.ಎನ್. ಜೀವರಾಜ್, ಮಾನ್ಯ ಶಾಸಕರು, ಶೃಂಗೇರಿ ವಿಧಾನಸಭಾ ಕ್ಷೇತ್ರ	ಅಧ್ಯಕ್ಷರು
2	ಶ್ರೀ ಕೆ.ಜಿ. ಶೋಬಿಂತ್ ಬಿನ್. ಗಣಪತಿ ಗೌಡ, ಕಾರ್‌ಗದ್ದೆ, ಶಾನುವಳ್ಳಿ ಅಂಚೆ, ಕೊಪ್ಪ ತಾಲ್ಲೂಕು	ಸದಸ್ಯರು, (ಸಾಮಾನ್ಯ)
3	ಶ್ರೀ ಬಿ.ಎಸ್. ಸುಬ್ರಮಣ್ಯ, ಮತ್ತಿಕೊಪ್ಪ (ಅಂಚೆ) ನರಸಿಂಹರಾಜಪುರ ತಾಲ್ಲೂಕು	ಸದಸ್ಯರು (ಪ.ಜಾತಿ)
4	ಶ್ರೀಮತಿ ಸೌಭಾಗ್ಯ ಗೋಪಾಲನ್ ಶೃಂಗೇರಿ, ಭಾರತಿನಗರ ಅಂಚೆ, ಶೃಂಗೇರಿ ತಾಲ್ಲೂಕು	ಸದಸ್ಯರು, (ಮಹಿಳೆ)
5	ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರರು	ಸದಸ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಉದಯ ಆರ್. ನಾಯಕ್,
ಪೀಠಾಧಿಕಾರಿ,
ಕಂದಾಯ ಇಲಾಖೆ (ಭೂ ಮಂ,–2).

P.R.542
SC - 25

HEALTH AND FAMILY WELFARE SECRETARIAT

NOTIFICATION

NO. HFW 215 RGU 2015, BENGALURU, DATED 24.08. 2015.

1) The Consensual Agreement reached between the Government and Private Unaided Professional Educational Institutions with regard to admission and fixation of fees for professional courses, Government shall notify the number of seats to be allotted for the academic year 2015-16 for the students selected for Medical and Dental Courses and also Government has notified the Fee Structure to be chargeable for the academic year 2015-16 from the candidates selected for Medical and Dental Courses as per the Consensual Agreements.

2) As per the Consensual Agreement reached between the Government and Private Unaided Professional Educational Institutions, 40% of the Government seats for Medical and 35% for Dental in Non-Minority Private Unaided Professional Educational Institutions and 25% of the Government seats for Medical and 25% of the Government seats for Dental in Minority Private Unaided Professional Educational Institutions are earmarked for the candidates selected by Karnataka Examination Authority to Medical and Dental Courses for the academic year 2015-16.

3) Further, the Deemed to be Universities were given undertaking at the time of issue of No Objection Certificate to attain deemed Status and also at the time of issuing EC & FC in which they were surrendered 25% of seats in total intake as per Government Order No. HFW 60 MMC 2010, dated 26-06-2010 and also as per the order of Hon'ble High Court of Karnataka in the Writ Petition Nos. 33669- 70/2014, the Writ Petitions are dismissed reserving the liberty to sought for the petitioner to file a fresh writ petition. Hence there is no interim order of stay for the Government Order No. HFW 140 RGU 2014, dated 02-07-2014 at this time.

4) In this regard, the Government of Karnataka hereby notify the fee chargeable for the academic year 2015-16 from the candidates selected for Medical and Dental Courses as shown in **Annexure-IV.**

5) Therefore, the Government of Karnataka hereby notify the seat matrix and fee structure for the academic year 2015-16 for Medical and Dental UG (MBBS and BDS) Courses-in Private Unaided Professional Educational Institutions and Deemed Universities Medical Colleges as per **ANNEXURE I to III** appended to this notification.

By Order and in the name of the Governor of Karnataka,
S.K. NAGAVENI
Under Secretary to Government-2,
Health and Family Welfare Department,
(Medical Education)

ANNEXURE-I

Distribution of I MBBS Government Seats among various Special Categories both in Government and Private Medical Colleges for the academic year 2015-16.(Additional seat matrix)

	Name of the Medical College	*Total Intake*	AIQ	Govt Quota Seats				KPCF	*MQ*
				Total SQ	SPQ	NHK	HK	Total	
	DEEMED UNIVERSITY MEDICAL COLLEGES								
1	JN Medical College, K.L.E.University	200		12	0	11	1		
2	Yenapoya University	50		13*	0	12	1		
3	Yenapoya University	100		25 **	1	22	2		
	TOTAL	**350**	**0**	**50**	**1**	**45**	**4**		
	Grand Total								

S.K. NAGAVENI
Under Secretary to Government-2,
Health and Family Welfare Department,
(Medical Eduction)

*As per the letter dated on 13/07/2015.

**As per the order of the Hon'ble High Court in W.P. No. 33669-670 of 2014.(EDN.MED.ADM)

ANNEXURE-II

Distribution of I MBBS Government Seats among various Special Categories both in Government and Private Medical Colleges for the academic year 2015-16.(Additional seat matrix)

	Name of the Medical College	Govt seats	Defence	Ex-Defence	Scouts & Guides	Sports	NCC	Anglo Indians	PH	Kashmiri migrants	CAPF	Total	Bal.	NHK	HK
1	JN Medical College, K.L.E.University	12							0			0	12	11	1
2	Yenapoya University	13							0			0	13	12	1

	Name of the Medical College	Govt seats	Defence	Ex-Defence	Scouts & Guides	Sports	NCC	Anglo Indians	PH	Kashmiri migrants	CAPF	Total	Bal.	NHK	HK
3	Yenapoya University	25							1			1	24	22	2
	TOTAL	**50**	**0**	**0**	**0**	**0**	**0**	**0**	**1**	**0**	**0**	**1**	**49**	**45**	**4**

S.K. NAGAVENI,
Under Secretary to Government-2,
Health and Family Welfare Department,
(Medical Eduction)

*As per the letter dated on 13/07/2015.

**As per the order of the Hon'ble High Court in W.P. No. 33669-670 of 2014.(EDN.MED.ADM)

ANNEXURE-III

STATEMENT SHOWING THE SEAT MATRIX OF I BDS UNDER GOVERNMENT & PRIVATE DENTAL COLLEGES FOR THE ACADEMIC YEAR 2015-16. (Additional seat Matrix)

I o	College Name	Total intake	All India	State Govt Quota				KPCF/K RLMPC	Management Quota
				Total SQ	SPQ	NHK	HK	NHK	
Minority Dental-Institutions-25%									
1	Srinivasa Dental College, Mangaluru	100		25		23	2	55	20
	Total Seats	**100**	**0**	**25**	**0**	**23**	**2**	**55**	**20**

S.K. NAGAVENI
Under Secretary to Government-2,
Health and Family Welfare Department,
(Medical Eduction)

ANNEXURE-IV

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : 2015–16ನೇ ಸಾಲಿಗೆ ರಾಜ್ಯದಲ್ಲಿರುವ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ/ದಂತ ವೈದ್ಯಕೀಯ ಕಾಲೇಜುಗಳಲ್ಲಿನ ಸ್ನಾತಕ ಕೋರ್ಸುಗಳ ಸೀಟುಗಳ ಶುಲ್ಕವನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ :

1. ಎಜುಕೇಷನ್ ಆಕ್ಟ್–2006ಕ್ಕೆ ತಿದ್ದುಪಡಿಗಳನ್ನು ತರುವ ಸಂಬಂಧ ಮಾನ್ಯ ಉನ್ನತ ಶಿಕ್ಷಣ ಸಚಿವರು ಮತ್ತು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿ:02.05.2015 ರಂದು ನಡೆದ ಸಭೆಯ ತೀರ್ಮಾನಗಳು.
2. ಕರ್ನಾಟಕ ವೃತ್ತಿಪರ ಕೋರ್ಸುಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿ ಕುರಿತು ಸರ್ಕಾರ ಹಾಗೂ ಖಾಸಗಿ ಆಡಳಿತ ಮಂಡಳಿಗಳ ನಡುವೆ ಸಮ್ಮತಾಭಿಪ್ರಾಯ ಒಪ್ಪಂದ ಮಾಡಿಕೊಳ್ಳಲು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿ: 26–05–2015 ರಂದು ಜರುಗಿದ ಸಭೆಯ ತೀರ್ಮಾನಗಳು.

ಪ್ರಸ್ತಾವನೆ :

ಮೇಲೆ ಓದಲಾದಂತೆ (1) ರಿಂದ (2) ರ ಸಭೆಯ ನಿರ್ಣಯಗಳನ್ವಯ 2015–16 ನೇ ಸಾಲಿನ ಸ್ನಾತಕ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸುಗಳ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿಗೆ ಸಂಬಂಧಿಸಿದಂತೆ ಪರಸ್ಪರ ಒಡಂಬಡಿಕೆ ಮಾಡಿಕೊಳ್ಳುವ ಸಲುವಾಗಿ ರಾಜ್ಯದ ಖಾಸಗಿ ಕಾಲೇಜುಗಳ ಸಂಘಗಳಾದ ಕಾಮೆಡ್–ಕೆ, ಕೆ.ಆರ್.ಎಲ್.ಎಂ.ಪಿ.ಸಿ.ಎ ಮತ್ತು ಎ.ಎಂ.ಪಿ.ಸಿ.ಕೆ. ಸಂಘಗಳ ಅಧ್ಯಕ್ಷರು/ ಪ್ರತಿನಿಧಿಗಳೊಂದಿಗೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿ: 26–05–2015 ರಂದು ನಡೆದ ಸಭೆಯಲ್ಲಿ 2015–16ನೇ ಸಾಲಿನ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಸ್ನಾತಕ ಕೋರ್ಸುಗಳಿಗೆ ಈ ಕೆಳಗಿನಂತೆ ಶುಲ್ಕವನ್ನು ಪರಿಷ್ಕರಿಸಲು ತೀರ್ಮಾನಿಸಲಾಗಿರುತ್ತದೆ.

ರಾಜ್ಯದಲ್ಲಿನ ಖಾಸಗಿ ವೈದ್ಯಕೀಯ /ದಂತ ವೈದ್ಯಕೀಯ ಕಾಲೇಜುಗಳಲ್ಲಿನ (ಕಾಮೆಡ್–ಕೆ) ವೈದ್ಯಕೀಯ (MBBS)/ ದಂತ ವೈದ್ಯಕೀಯ (BDS) ಸೀಟುಗಳಿಗೆ ಪಾವತಿಸಬೇಕಾದ ಶುಲ್ಕದ ವಿವರ.

₹. ಗಳಲ್ಲಿ

ಸಂಖ್ಯೆ	ಕೋರ್ಸುಗಳ ವಿವರ	ಕಾಮೆಡ್–ಕೆ ಅಭ್ಯರ್ಥಿಗಳಿಗೆ		ಸಿಇಟಿ ಮೂಲಕ ಸರ್ಕಾರಿ ಕೋಟಾದಡಿ ಆಯ್ಕೆಯಾದ ಅಭ್ಯರ್ಥಿಗಳಿಗೆ	
		ಪ್ರಸ್ತುತ ನಿಗದಿಪಡಿಸಿರುವ ಶುಲ್ಕ	ಪರಿಷ್ಕೃತ ಶುಲ್ಕ	ಪ್ರಸ್ತುತ ನಿಗದಿಪಡಿಸಿರುವ ಶುಲ್ಕ	ಪರಿಷ್ಕೃತ ಶುಲ್ಕ
ಅ)	ಎಂಬಿಬಿಎಸ್	3,57,500	4,25,000	38,500	55,000
ಆ)	ಬಿಡಿಎಸ್	2,53,000	2,75,000	27,500	35,000

ರಾಜ್ಯದಲ್ಲಿನ ಖಾಸಗಿ ವೈದ್ಯಕೀಯ / ದಂತ ವೈದ್ಯಕೀಯ ಕಾಲೇಜುಗಳಲ್ಲಿನ (ಕೆ.ಆರ್.ಎಲ್.ಎಂ.ಪಿ.ಸಿ.ಎ & ಎ.ಎಂ.ಪಿ.ಸಿ.ಕೆ) ವೈದ್ಯಕೀಯ (MBBS)/ ದಂತ ವೈದ್ಯಕೀಯ (BDS) ಸೀಟುಗಳಿಗೆ ಪಾವತಿಸಬೇಕಾದ ಶುಲ್ಕದ ವಿವರ.

₹. ಗಳಲ್ಲಿ

ಸಂಖ್ಯೆ	ಕೋರ್ಸುಗಳ ವಿವರ	KRLMPCA & AMPCK ಅಭ್ಯರ್ಥಿಗಳಿಗೆ		ಸಿಇಟಿ ಮೂಲಕ ಸರ್ಕಾರಿ ಕೋಟಾದಡಿ ಆಯ್ಕೆಯಾದ ಅಭ್ಯರ್ಥಿಗಳಿಗೆ	
		ಪ್ರಸ್ತುತ ನಿಗದಿಪಡಿಸಿರುವ ಶುಲ್ಕ	ಪರಿಷ್ಕೃತ ಶುಲ್ಕ	ಪ್ರಸ್ತುತ ನಿಗದಿಪಡಿಸಿರುವ ಶುಲ್ಕ	ಪರಿಷ್ಕೃತ ಶುಲ್ಕ
ಅ)	ಎಂಬಿಬಿಎಸ್	3,57,500	4,25,000	38,500	55,000
ಆ)	ಬಿಡಿಎಸ್	2,53,000	2,75,000	27,500	35,000

ಉಳಿದಂತೆ ಸರ್ಕಾರಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಿಗೆ 2015–16ನೇ ಸಾಲಿನಲ್ಲಿ ಸ್ನಾತಕ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸುಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಪಾವತಿಸಬೇಕಾದ ಶುಲ್ಕವು ಈ ಕೆಳಗಿನಂತಿರುತ್ತದೆ.

₹. ಗಳಲ್ಲಿ

ಕ್ರಸಂ	ಕೋರ್ಸುಗಳ ವಿವರ	ನಿಗದಿಪಡಿಸಿರುವ ಶುಲ್ಕ
1.	ಎಂಬಿಬಿಎಸ್	16,700
2.	ಬಿಡಿಎಸ್	14,400

ಮುಂದುವರಿದು, ಡೀಮ್ಡ್ ವಿಶ್ವವಿದ್ಯಾಲಯಗಳ ವ್ಯಾಪ್ತಿಗೆ ಒಳಪಡುವ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಲ್ಲಿ ಸಿಇಟಿ ಮೂಲಕ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಸಂಬಂಧಪಟ್ಟ ವೈದ್ಯಕೀಯ ಕಾಲೇಜುಗಳು ನಿಗದಿಪಡಿಸುವ ಶುಲ್ಕವನ್ನು ಪಾವತಿಸಬೇಕಾಗಿದೆಯೆಂದು, ಆದರೆ, ಶುಲ್ಕ ಮರುಪಾವತಿಗೆ ಅರ್ಹರಾಗಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಕಾಮೆಡ್–ಕೆ ಸಂಸ್ಥೆಯೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಪ್ರಕಾರ ನಿಗದಿಪಡಿಸಿರುವ ಶುಲ್ಕವನ್ನು ಮರುಪಾವತಿಸಲಾಗುವುದು ಹಾಗೂ ವ್ಯತ್ಯಾಸದ ಮೊತ್ತವನ್ನು ಅಭ್ಯರ್ಥಿಗಳೇ ಸ್ವಂತವಾಗಿ ಭರಿಸತಕ್ಕದ್ದೆಂದು ತೀರ್ಮಾನವಾಗಿರುತ್ತದೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ, ರಾಜ್ಯದಲ್ಲಿನ ಖಾಸಗಿ ವೈದ್ಯಕೀಯ/ದಂತ ವೈದ್ಯಕೀಯ ಸ್ನಾತಕ ಕೋರ್ಸುಗಳ ಸೀಟುಗಳ ಪ್ರವೇಶ ಶುಲ್ಕವನ್ನು ಮೇಲ್ಕಂಡಂತೆ 2015–16ನೇ ಸಾಲಿಗೆ ಪರಿಷ್ಕರಿಸಲು ಸರ್ಕಾರವು ತೀರ್ಮಾನಿಸಿ, ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆಕುಕ 111 ಆರ್‌ಜಿಯು 2015, ಬೆಂಗಳೂರು, ದಿನಾಂಕ 30–05–2015.

ರಾಜ್ಯದಲ್ಲಿನ ಖಾಸಗಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಸ್ನಾತಕ ಕೋರ್ಸುಗಳ ಸೀಟುಗಳ ಪ್ರವೇಶ ಶುಲ್ಕವನ್ನು **2015–16ನೇ ಸಾಲಿಗೆ** ಈ ಕೆಳಕಂಡಂತೆ ಪರಿಷ್ಕರಿಸಿ ಆದೇಶಿಸಲಾಗಿದೆ.

ರಾಜ್ಯದಲ್ಲಿನ ಖಾಸಗಿ ವೈದ್ಯಕೀಯ / ದಂತ ವೈದ್ಯಕೀಯ ಕಾಲೇಜುಗಳಲ್ಲಿನ (ಕಾಮೆಡ್–ಕೆ) ವೈದ್ಯಕೀಯ (MBBS)/ದಂತ ವೈದ್ಯಕೀಯ (BDS) ಸೀಟುಗಳಿಗೆ ಪಾವತಿಸಬೇಕಾದ ಶುಲ್ಕದ ವಿವರ.

₹. ಗಳಲ್ಲಿ

ಸಂಖ್ಯೆ	ಕೋರ್ಸುಗಳ ವಿವರ	ಕಾಮೆಡ್–ಕೆ ಅಭ್ಯರ್ಥಿಗಳಿಗೆ		ಸಿಇಟಿ ಮೂಲಕ ಸರ್ಕಾರಿ ಕೋಟಾದಡಿ ಆಯ್ಕೆಯಾದ ಅಭ್ಯರ್ಥಿಗಳಿಗೆ	
		ಪ್ರಸ್ತುತ ನಿಗದಿಪಡಿಸಿರುವ ಶುಲ್ಕ	ಪರಿಷ್ಕೃತ ಶುಲ್ಕ	ಪ್ರಸ್ತುತ ನಿಗದಿಪಡಿಸಿರುವ ಶುಲ್ಕ	ಪರಿಷ್ಕೃತ ಶುಲ್ಕ
ಅ)	ಎಂಬಿಬಿಎಸ್	3,57,500	4,25,000	38,500	55,000
ಆ)	ಬಿಡಿಎಸ್	2,53,000	2,75,000	27,500	35,000

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment **WPP No. 297**

ರಾಜ್ಯದಲ್ಲಿನ ಖಾಸಗಿ ವೈದ್ಯಕೀಯ /ದಂತ ವೈದ್ಯಕೀಯ ಕಾಲೇಜುಗಳಲ್ಲಿನ (ಕೆ.ಆರ್.ಎಲ್.ಎಂ.ಪಿ.ಸಿ.ಎ ಮತ್ತು ಎ.ಪಿ.ಎಂ.ಸಿ.ಕೆ.) ವೈದ್ಯಕೀಯ (MBBS)/ದಂತ ವೈದ್ಯಕೀಯ (BDS) ಸೀಟುಗಳಿಗೆ ಪಾವತಿಸಬೇಕಾದ ಶುಲ್ಕದ ವಿವರ.

₹. ಗಳಲ್ಲಿ

ಸಂಖ್ಯೆ	ಕೋರ್ಸುಗಳ ವಿವರ	KRLMPCA & AMPCK ಅಭ್ಯರ್ಥಿಗಳಿಗೆ		ಸಿಇಟಿ ಮೂಲಕ ಸರ್ಕಾರಿ ಕೋಟಾದಡಿ ಆಯ್ಕೆಯಾದ ಅಭ್ಯರ್ಥಿಗಳಿಗೆ	
		ಪ್ರಸ್ತುತ ನಿಗದಿಪಡಿಸಿರುವ ಶುಲ್ಕ	ಪರಿಷ್ಕೃತ ಶುಲ್ಕ	ಪ್ರಸ್ತುತ ನಿಗದಿಪಡಿಸಿರುವ ಶುಲ್ಕ	ಪರಿಷ್ಕೃತ ಶುಲ್ಕ
ಅ)	ಎಂಬಿಬಿಎಸ್	3,57,500	4,25,000	38,500	55,000
ಆ)	ಬಿಡಿಎಸ್	2,53,000	2,75,000	27,500	35,000

ಉಳಿದಂತೆ ಸರ್ಕಾರಿ ಸ್ವಾಯತ್ತ ವೈದ್ಯಕೀಯ / ದಂತ ವೈದ್ಯಕೀಯ ಕಾಲೇಜುಗಳಿಗೆ 2015-16ನೇ ಸಾಲಿನಲ್ಲಿ ಸ್ನಾತಕ ವೈದ್ಯಕೀಯ & ದಂತ ವೈದ್ಯಕೀಯ ಕೋರ್ಸುಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ಶುಲ್ಕ ನಿಗದಿಪಡಿಸಲಾಗಿದೆ.

ರೂ. ಗಳಲ್ಲಿ

ಕ್ರಸಂ	ಕೋರ್ಸುಗಳ ವಿವರ	ನಿಗದಿಪಡಿಸಿರುವ ಶುಲ್ಕ
1.	ಎಂಬಿಬಿಎಸ್	16,700
2.	ಬಿಡಿಎಸ್	14,400

ಮುಂದುವರಿದು, ಡೀಮ್ಡ್ ವಿಶ್ವವಿದ್ಯಾಲಯಗಳ ವ್ಯಾಪ್ತಿಗೆ ಒಳಪಡುವ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಲ್ಲಿ ಸಿಇಟಿ ಮೂಲಕ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಸಂಬಂಧಪಟ್ಟ ವೈದ್ಯಕೀಯ ಕಾಲೇಜುಗಳು ನಿಗದಿಪಡಿಸುವ ಶುಲ್ಕವನ್ನೇ ಪಾವತಿಸತಕ್ಕದ್ದು. ಆದರೆ, ಶುಲ್ಕ ಮರುಪಾವತಿಗೆ ಅರ್ಹರಾಗಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಕಾಮೆಡ್-ಕೆ ಸಂಸ್ಥೆಯೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಪ್ರಕಾರ ನಿಗದಿಪಡಿಸಿರುವ ಶುಲ್ಕವನ್ನು ಮರುಪಾವತಿಸಲಾಗುವುದು. ಆದರೆ, ವ್ಯತ್ಯಾಸದ ಮೊತ್ತವನ್ನು ಅಭ್ಯರ್ಥಿಗಳೇ ಸ್ವಯಂ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಕೆ. ನಾಗವೇಣಿ,
ಸರ್ಕಾರದ ಅಧೀನ ಕಾರ್ಯದರ್ಶಿ-2,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.(ವೈದ್ಯಕೀಯ ಶಿಕ್ಷಣ)

P.R.543
SC-50

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ ನಅಇ 332 ಬೆಮಪ್ರಾ 2015, ಬೆಂಗಳೂರು, ದಿನಾಂಕ: 19.08.2015.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 5ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಬೆಳಗಾವಿ ಸ್ಥಳೀಯ ಯೋಜನಾ ಪ್ರದೇಶಕ್ಕೆ ಹೊಸದಾಗಿ ಸೇರ್ಪಡೆಯಾದ ಬಸ್ತವಾಡ ಹಾಗೂ ಶಗನಮಟ್ಟಿ ಗ್ರಾಮಗಳ ಭೂ ಉಪಯೋಗವನ್ನು ಗುರುತಿಸಲು ದಿನಾಂಕ 02.02.2015 ರಿಂದ ಜಾರಿಗೆ ಬರುವಂತೆ ನಿರ್ಧರಿಸಿ ಘೋಷಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ವಿ. ರಾಜೇಂದ್ರ,
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

P.R.544
S.C. 50

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-59